ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ವಸ್ತು ಸ್ಥಿತಿ ಬೇರೆ ಇದೆ. ಪ್ರತಿಯೊಂದು ಗ್ರಾಮಪಂಚಾಯ್ತಿಗೂ ಒಂದು ಕಾಲು ಲಕ್ಷ ರೂ.ಗಳ ಅನುದಾನ ಕೊಡುತ್ತೇವೆ. ಅದರಲ್ಲಿ ನಿರ್ದಿಷ್ಟವಾಗಿ ಇಂತಹ ವಿಚಾರಗಳಿಗೆ, ಇದನ್ನು ಉಪಯೋಗ ಮಾಡಬೇಕೆಂದು ಇದೆ. ನಾವು ಪ್ರತಿ ಗ್ರಾಮಪಂಚಾಯ್ತಿಗೂ ಹಣ ಕೊಡುತ್ತಾ ಇದ್ದೇವೆ. ಆದ್ದರಿಂದ, ಆ ಗ್ರಾಮಪಂಚಾಯ್ತಿಯವರು ದುರಸ್ತಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ, ಜಿಲ್ಲಾ ಪಂಚಾಯ್ತಿಯವರು ಮಾಡಲಿ ಎಂದು ಹೇಳಿದ್ದಾರೆ. ಈಗ ಜಿಲ್ಲಾ ಪಂಚಾಯ್ತಿಯವರ ಕಡೆಯಿಂದ ಮಾಡಿಸುತ್ತಾ ಇದ್ದೇವೆ. ಹೆಚ್ಚುವರಿ ಹಣ ಬೇಕಾಗಿದ್ದರೆ, ಅದನ್ನೂ ಕೊಡಲಿಕ್ಕೆ ತಯಾರಿದ್ದೇವೆ. ಜಿಲ್ಲಾ ಪಂಚಾಯ್ತಿಗೆ ಪ್ರತ್ಯೇಕವಾದಂಥ ಹಣ ಇದೆ. 2 ಕೋಟಿ 61 ಲಕ್ಷ ರೂಪಾಯಿಗಳನ್ನು 1996-97ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಾಗಿಯೇ ನಾವು ಖರ್ಚು ಮಾಡಿದ್ದೇವೆ. ಆದ್ದರಿಂದ, ಈ ವಿಚಾರದಲ್ಲಿ ಯಾವುದೇ ರೀತಿಯ ತೊಂದರೆಗಳೂ ಇಲ್ಲ. ಕೆಲವು ಕಡೆಗಳಲ್ಲಿ ಅನ್ಯ ಕಾರಣಗಳಿಂದ ತೊಂದರೆಯಾಗಿರಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಒಂದೇ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:- ಟೈಮ್ ಇಲ್ಲ, ಇನ್ನೂ 8 ಪ್ರಶ್ನೆಗಳು ಇವೆ, ಮುಂದಿನ ಪ್ರಶ್ನೆಗೆ ಹೋಗೋಣ, ದಯಮಾಡಿ ಸಹಕರಿಸಬೇಕು. ನಿಮ್ಮನ್ನು ಮೊದಲನೇ ಬೆಂಚಿಗೆ ತರುವುದೇ ಒಂದು ದೊಡ್ಡ ಗೌರವ.

ವಿಷಯ:- ಸವಣೂರು ತಾಲ್ಲೂಕಿನಲ್ಲಿ 1995-96 ಹಾಗೂ 1996-97ನೇ ಸಾಲಿನಲ್ಲಿ ತೆಗೆದುಕೊಂಡ ಕಾಮಗಾರಿಗಳು.

8(94)

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಸವಣೂರು ತಾಲ್ಲೂಕು ಪಂಚಾಯಿತಿಯ 1995-96 ಮತ್ತು 1996-97ನೇ ಹಣಕಾಸಿನ ವರ್ಷದಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು. ಸದರಿ ಕಾಮಗಾರಿಗಳು ಯಾವ ಹಂತದಲ್ಲಿವೆ;

ಆ) ಈ ಕಾಮಗಾರಿಗಳಿಗಾಗಿ ಈವರೆಗೂ ಖರ್ಚು ಮಾಡಲಾದ ಹಣದ ವಿವರಗಳನ್ನು ಒದಗಿಸುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):-

ಅ)

1995-96ನೇ ಸಾಲಿನಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರ:	ಸಂಖ್ಯೆ	ಕಾಮಗಾರಿಗಳ ಹಂತ
1. ಉದ್ಯೋಗ ಭರವಸೆ ಯೋಜನೆ		
1. ಅಂಗನವಾಡಿ ಕಟ್ಟಡಗಳು (94-95ನೇ ಸಾಲಿನಿಂದ ಮುಂದುವರಿದವು)	3	(2 ಅಂಗನವಾಡಿ ಕಟ್ಟಡಗಳು ಪೂರ್ಣವಾಗಿದ್ದು 1 ಕಟ್ಟಡ ಪ್ರಗತಿಯಲ್ಲಿದೆ.
2. ಶಾಲಾ ಕಟ್ಟಡಗಳು (94-95ನೇ ಸಾಲಿನಿಂದ ಮುಂದುವರಿದವು)	17	(16 ಶಾಲಾ ಕೊಠಡಿಗಳು ಪೂರ್ಣವಾಗಿದ್ದು 1 ಶಾಲಾ ಕೊಠಡಿಗೆ ಹೈ-ಕೋರ್ಟ್‌ನಿಂದ್ ತಡೆ ಆಜ್ಞೆ ಇದೆ)
3. ಅಂಗನವಾಡಿ ಕಟ್ಟಡಗಳು	9	(9 ಅಂಗನವಾಡಿ ಕಟ್ಟಡ ಕೆಲಸಗಳು ಪ್ರಗತಿಯಲ್ಲಿವೆ)
2. ಇಂದಿರಾ ಆವಾಜ್ ಯೋಜನೆ		
1. ಮನೆಗಳ ನಿರ್ಮಾಣ	101	(101 ಮನೆಗಳು ಪೂರ್ಣಗೊಂಡಿರುತ್ತವೆ)
3. ಆಶ್ರಯ ಯೋಜನೆ:		
1. ಮನೆಗಳ ನಿರ್ಮಾಣ	254	(185 ಮನೆಗಳು ಪೂರ್ಣಗೊಂಡಿವೆ. 69 ಮನೆಗಳು ಪ್ರಗತಿಯಲ್ಲಿವೆ)
4. ಅಂಬೇಡ್ಕರ್ ಯೋಜನೆ:		
1. ಮನೆಗಳ ನಿರ್ಮಾಣ	107	(107 ಮನೆಗಳು ಪೂರ್ಣಗೊಂಡಿವೆ)
5. ನಿರ್ಮಲ ಗ್ರಾಮ ಯೋಜನೆ:		
ಅ) ವೈಯಕ್ತಿಕ ಶೌಚಾಲಯಗಳ ನಿರ್ಮಾಣ	2000	(895 ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಮಾಡಿದ್ದು ಅದರಲ್ಲಿ 454 ಶೌಚಾಲಯಗಳಿಗೆ ಮಾತ್ರ ಸಹಾಯ ಧನ ಪಾವತಿ ಮಾಡಿದೆ.
ಬ) ಸಾಂಸ್ಥಿಕ ಶೌಚಾಲಯಗಳು	22	(5 ಸಾಂಸ್ಥಿಕ ಶೌಚಾಲಯಗಳನ್ನು ನಿರ್ಮಿಸಿದೆ)

1996-97ನೇ ಸಾಲಿನಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರ:	ಸಂಖ್ಯೆ	ಕಾಮಗಾರಿಗಳ ಹಂತ
1. ಉದ್ಯೋಗ ಭರವಸೆ ಯೋಜನೆ:		
1. ಅಂಗನವಾಡಿ ಕಟ್ಟಡಗಳು (1995-96ನೇ ಸಾಲಿನಿಂದ ಮುಂದುವರಿದವು)	10	10 ಅಂಗನವಾಡಿ ಕಟ್ಟಡಗಳು ಪೂರ್ಣಗೊಂಡಿವೆ.
2. ಶಾಲಾ ಕೊಠಡಿಗಳು	1	1 ಕೋರ್ಟ್‌ನಿಂದ ತಡೆ ಆಜ್ಞೆ ಬಂದಿದ್ದರಿಂದ ಅರ್ಧಕ್ಕೆ ನಿಂತಿವೆ.
3. ಅಂಗನವಾಡಿ ಕಟ್ಟಡಗಳು	4	2 ಅಂಗನವಾಡಿ ಕಟ್ಟಡಗಳ ಕೆಲಸ ಪ್ರಗತಿಯಲ್ಲಿದ್ದು, ಇನ್ನೂ 2 ಕಟ್ಟಡಗಳ ಕೆಲಸ ಪ್ರಾರಂಭಿಸಬೇಕಾಗಿದೆ.
2. ಇಂದಿರಾ ಆವಾಜ್ ಯೋಜನೆ:		
1. ಮನೆಗಳ ನಿರ್ಮಾಣ	124	50 ಮನೆಗಳು ಪೂರ್ಣವಾಗಿದ್ದು 74 ಮನೆಗಳ ನಿರ್ಮಾಣ ಪ್ರಗತಿ-ಯಲ್ಲಿರುತ್ತವೆ.
3. ಆಶ್ರಯ ಯೋಜನೆ:		
1. ಮನೆಗಳ ನಿರ್ಮಾಣ	86	ಫಲಾನುಭವಿಗಳ ಆಯ್ಕೆ ಮಾಡಿದ್ದು ಮನೆಗಳ ನಿರ್ಮಾಣ ಕೆಲಸ ಕೂಡಲೇ ಪ್ರಾರಂಭಿಸಲಾಗುವುದು.
4. ಅಂಬೇಡ್ಕರ್ ಯೋಜನೆ:		
1. ಮನೆಗಳ ನಿರ್ಮಾಣ	111	ಅನುದಾನ ಬಿಡುಗಡೆ ಆಗದೇ ಇದ್ದುದರಿಂದ ನಿರ್ಮಾಣ ಕಾರ್ಯ ಪ್ರಾರಂಭಿಸಿಲ್ಲ.

ಆ)

1995-96ನೇ ಸಾಲಿನ ಖರ್ಚಿನ ವಿವರ ಕಾಮಗಾರಿಗಳು.	ಬಿಡುಗಡೆ ಮಾಡಿದ ಅನುದಾನ	ಖರ್ಚಾದ ಅನುದಾನ
1. ಉದ್ಯೋಗ ಭರವಸೆ ಯೋಜನೆ:		
1. ಅಂಗನವಾಡಿ ಕಟ್ಟಡಗಳು (1994-95ನೇ ಸಾಲಿನ ಮುಂದುವರೆದವು)		69,583.00
2. ಶಾಲಾ ಕಟ್ಟಡಗಳು (1994-95ನೇ ಸಾಲಿನ ಮುಂದುವರೆದವು)	17,30,049.00	5,76,628.00
3. ಅಂಗನವಾಡಿ ಕಟ್ಟಡಗಳು		6,85,677.00
2. ಇಂದಿರಾ ಅವಾಸ್ ಯೋಜನೆ:		
1. ಮನೆಗಳ ನಿರ್ಮಾಣ	15,14,800.00	15,14,800.00
3. ಆಶ್ರಯ ಯೋಜನೆ:		
1. ಮನೆಗಳ ನಿರ್ಮಾಣ	35,73,400.00	34,35,400.00
4. ಡಾ. ಅಂಬೇಡ್ಕರ್ ಯೋಜನೆ:		
1. ಮನೆಗಳ ನಿರ್ಮಾಣ	21,40,000.00	21,40,000.00
5. ನಿರ್ಮಲ ಗ್ರಾಮ ಯೋಜನೆ:		
1. ವೈಯಕ್ತಿಕ ಶೌಚಾಲಯಗಳ ನಿರ್ಮಾಣ	9,02,000.00	8,98,671.00
2. ಸಾಂಸ್ಥಿಕ ಶೌಚಾಲಯಗಳ ನಿರ್ಮಾಣ	80,000.00	79,000.00

1996-97ನೇ ಸಾಲಿನ ಖರ್ಚಿನ ವಿವರ ಕಾಮಗಾರಿಗಳು.	ಬಿಡುಗಡೆ ಮಾಡಿದ ಅನುದಾನ	ಖರ್ಚಾದ ಅನುದಾನ
1. ಉದ್ಯೋಗ ಭರವಸೆ ಯೋಜನೆ:		
ಅ. ಅಂಗನವಾಡಿ ಕಟ್ಟಡಗಳು (95-96ನೇ ಸಾಲಿಗೆ ಮುಂದುವರೆದವು)		3,95,069.00
ಬ. ಶಾಲಾ ಕೊಠಡಿಗಳು (95-96ನೇ ಸಾಲಿನ ಮುಂದುವರೆದವು)	4,97,161.00	-
ಕ. ಅಂಗನವಾಡಿ ಕಟ್ಟಡಗಳು		65,000.00
2. ಇಂದಿರಾ ಆವಾಸ್ ಯೋಜನೆ:		
ಅ. ಮನೆಗಳ ನಿರ್ಮಾಣ	11,35,000.00	11,35,000.00
3. ಆಶ್ರಯ ಯೋಜನೆ:		
ಅ. ಮನೆಗಳ ನಿರ್ಮಾಣ	1,86,000.00	-
4. ಅಂಬೇಡ್ಕರ್ ಯೋಜನೆ:		
ಅ. ಮನೆಗಳ ನಿರ್ಮಾಣ	-	-

ಶ್ರೀ ಮಂಜುನಾಥ್ ಸಿ. ಕುನ್ನೂರ್:- ಮಾನ್ಯ ಅಧ್ಯಕ್ಷರೇ, ಸವಣೂರು ತಾಲ್ಲೂಕು ಪಂಚಾಯ್ತಿಯ 1995-96ನೇ ಮತ್ತು 1996-97ನೇ ಹಣಕಾಸಿನ ವರ್ಷದಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು, ಸದರಿ ಕಾಮಗಾರಿಗಳು ಯಾವ ಹಂತದಲ್ಲಿದೆ ಎಂದು ಕೇಳಿರುವುದಕ್ಕೆ, ತಮ್ಮ ಉತ್ತರದಲ್ಲಿ ಉದ್ಯೋಗ ಭರವಸೆ ಯೋಜನೆ, ಇಂದಿರಾ ಆವಾಜ್ ಯೋಜನೆ ಮತ್ತು ಅಂಬೇಡ್ಕರ್ ಯೋಜನೆ ಬಗ್ಗೆ ಮಾತ್ರ ಉತ್ತರವನ್ನು ಕೊಟ್ಟಿದ್ದೀರಿ. 80 ಪರ್ಸೆಂಟ್ ಜೆ ಆರ್ ವೈ ಮತ್ತು ಇ.ವಿ.ಎಸ್. ಸ್ಕೀಮ್‌ನಲ್ಲಿ ರಸ್ತೆಗಳನ್ನು ತೆಗೆದುಕೊಂಡ ಕಾಮಗಾರಿಗಳ ವಿವರಗಳನ್ನು ತಾವು ನೀಡಿಲ್ಲ. ಈ ವಿವರದಲ್ಲಿ ನೀಡಿದಂತೆ, ಈ ಉದ್ಯೋಗ ಭರವಸೆ ಯೋಜನೆಯೊಳಗೆ ಈ ಶಾಲಾ ಕಟ್ಟಡಗಳನ್ನಾಗಲೀ ಅಥವಾ ಅಂಗನವಾಡಿ ಕಟ್ಟಡಗಳನ್ನು ಮಾಡುವಾಗ, ಉದ್ಯೋಗ ಭರವಸೆ ಯೋಜನೆಯ ಮೂಲ ಉದ್ದೇಶದಂತೆ, ಅಂದರೆ ಸ್ಥಳೀಕವಾಗಿ ಇರತಕ್ಕಂತ ಕಾರ್ಮಿಕರಿಗೆ ಕೆಲಸ ಕೊಡುವ ಬದಲು ಗುತ್ತಿಗೆದಾರರಿಗೆ ಕೆಲಸ ಕೊಟ್ಟು ಮಾಡಿಸುತ್ತಾ ಇರುವುದರಿಂದ, ಈ ಯೋಜನೆ ಸಫಲವಾಗುವುದಿಲ್ಲವೆನ್ನುವುದನ್ನು ಹೇಳಬಯಸುತ್ತೇನೆ. ಈ ನಿರ್ಮಲ ಗ್ರಾಮ ಯೋಜನೆಯಲ್ಲಿ ಸುಮಾರು 2 ಸಾವಿರ 1995-96ನೇ ಸಾಲಿಗೆ ವೈಯಕ್ತಿಕ ಶೌಚಾಲಯಗಳನ್ನು ಮಾಡಬೇಕಾಗಿದ್ದರೂ ಕೂಡ...

ಅಧ್ಯಕ್ಷರು:- ಗುತ್ತಿಗೆದಾರರು ಎಂದರೆ, ಟೆಂಡರ್ ಕರೆದಿದ್ದಾರೆಯೇ?

ಶ್ರೀ ಮಂಜುನಾಥ್ ಸಿ. ಕುನ್ನೂರ್:- ಕಂಟ್ರಾಕ್ಟರ್ಸ್‌ಗೆ ಕೊಟ್ಟು ನಡೆಸುತ್ತಿದ್ದಾರೆ.

ಅಧ್ಯಕ್ಷರು:- ಎಲ್ಲಾ ಕಡೆಗೂ ಅದೇ ರೀತಿ ಆಗುತ್ತಿರುವುದು.

ಶ್ರೀ ಮಂಜುನಾಥ ಸಿ. ಕುನ್ನೂರ್:- ಇದು ಆಗಬಾರದು; otherwise JRY and EAS will be futile... ಆ ದೃಷ್ಟಿಯಿಂದ, ಎಲ್ಲಾ ಕಡೆಗೂ ಆ ರೀತಿ ಮಾಡುತ್ತಿರುವುದರಿಂದ, ಇವತ್ತು ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ....

ಅಧ್ಯಕ್ಷರು:- ಗುತ್ತಿಗೆದಾರರು ಎಂದರೆ, ಇದರಲ್ಲಿ ಎಂಟ್ರಸ್ಟ್‌ಮೆಂಟ್ ಇರುವುದಿಲ್ಲ. ಅಲ್ಲಿಯೇ ಯಾರೋ ಒಬ್ಬ ಮುಖಂಡರು ಇರುತ್ತಾರೆ. ಎಲ್ಲಾ ಮುಂದುವರಿಸಿಕೊಂಡು, ಕೆಲಸ ಮಾಡಿಕೊಂಡು ಹೋಗುತ್ತಾರೆ. ಕೆಲವು ಸಲ ಹಣ ಬರುವುದೂ ತಡವಾಗುತ್ತದೆ. ಕೆಲಸ ಮಾಡಿರುತ್ತಾರೆ, ಕಾದುಕೊಂಡಿರುತ್ತಾರೆ. ಅವರಿಗೆ ಕೂಲಿ ಸಿಗುತ್ತದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ನಾವು ಪ್ರಾಕ್ಟಿಕಲ್ ಆಗಿಯೂ ಮಾತನಾಡಬೇಕಲ್ಲಾ.

ಶ್ರೀ ಮಂಜುನಾಥ ಸಿ. ಕುನ್ನೂರ್:- ಮಾನ್ಯ ಅಧ್ಯಕ್ಷರೇ, ಗುತ್ತಿಗೆದಾರರಿಗೆ ಕೊಟ್ಟರೂ ಕೂಡ ಕೊನೇಪಕ್ಷ ತಾಲ್ಲೂಕಿನೊಳಗೆ 10-15 ಮಂದಿ ತಮಗೆ ಬೇಕಾದವರನ್ನು ತೆಗೆದುಕೊಂಡು ಅವರ ಹೆಬ್ಬೆಟ್ಟು ಹಾಕಿಸಿ, ಮಾನವ ದಿನ ಎಂದು ಮಾಡಿಕೊಂಡು, ಅವರಿಗೆ ಪೇಮೆಂಟ್ ಮಾಡುತ್ತಾರೆ. ಕೊನೇಪಕ್ಷ ಆ ಊರಿನಲ್ಲಿರತಕ್ಕಂತಹವರಿಗೆ...

ಅಧ್ಯಕ್ಷರು:- ನಿಮ್ಮ ಸಮಸ್ಯೆ ನನಗೆ ಅರ್ಥವಾಯಿತು. ಅಲ್ಲಿ ತಾಲ್ಲೂಕು ಪಂಚಾಯಿತಿಗೂ ಇವರಿಗೂ ಸ್ವಲ್ಪ ಸಾಮರಸ್ಯ ಇಲ್ಲ. ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಕೆಲಸ ಮಾಡುವಂತೆ ಹೇಳಬೇಕು.

ಶ್ರೀ ಮಂಜುನಾಥ್ ಸಿ. ಕುನ್ನೂರ್:- ಇ.ಎ.ಎಸ್. ಸ್ಕೀಮ್ ಅನ್ನು ಇವತ್ತು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದಾರೆ; ಇವತ್ತು ರಾಜ್ಯದಾದ್ಯಂತ ಇದರ ಉಪಯೋಗ ಯಾವರೀತಿ ಆಗಬೇಕಾಗಿದೆ. ರಸ್ತೆಗಳನ್ನು ನಿರ್ಮಾಣ ಮಾಡುವುದಾಗಲೀ ಅಥವಾ ಕಟ್ಟಡಗಳನ್ನು ಕಟ್ಟತಕ್ಕಂತಾದ್ದಗಲೀ ಅಲ್ಲಿ ನೀವು ಸ್ಥಳೀಯವಾಗಿ ಇರತಕ್ಕವರಿಗೆ ಆದ್ಯತೆಯನ್ನು ಕೊಡಬೇಕು. ಇಲ್ಲದೇ ಹೋದರೆ, ಅದರ ಉದ್ದೇಶ ಸಫಲವಾಗುವುದಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ವಾಸ್ತವ ಸಂಗತಿಗಳು ಬೇರೇನೇ ಇರುತ್ತದೆ. ಆದೇನೇ ಇರಲಿ 100 ದಿನಗಳ ಕೆಲಸ ಕೊಡಬೇಕೆಂಬ ಉದ್ದೇಶಕ್ಕೆ ಅನುಗುಣವಾಗಿ ಈ ಸಫಲತೆಯ ಕೆಲಸಕಾರ್ಯಗಳನ್ನು ಮಾಡುತ್ತಾ ಇದ್ದೇವೆ. ಜೆ ಆರ್ ವೈ ವಿಚಾರದಲ್ಲಿ ಮಾತ್ರ ವಿವರಗಳನ್ನು ಕೊಟ್ಟಿಲ್ಲ. ಉಳಿದ ವಿವರಗಳನ್ನು ನಾವು ಕೊಟ್ಟಿದ್ದೇವೆ. ಉಳಿದ ವಿಷಯವನ್ನು ಮಾನ್ಯ ಅಧ್ಯಕ್ಷರು ಹೇಳಿದಂತೆ ನಾನು ಮೌಖಿಕವಾಗಿ ಆದೇಶವನ್ನು ತಮ್ಮ ಪರವಾಗಿ ಕೊಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಜೆ.ಆರ್. ವೈ. ಮತ್ತು ಉದ್ಯೋಗ ಭರವಸೆ ಯೋಜನೆಯೊಳಗೆ ಗುತ್ತಿಗೆದಾರರನ್ನು ನೇಮಿಸಬಾರದೆಂದು ಗೈಡ್‌ಲೈನ್ಸ್ ಇದೆ. ಆದರೂ ಎಲ್ಲಾ ಕಡೆ

ನೇಮಿಸುವುದು ನಮಗೆಲ್ಲರಿಗೂ ಗೊತ್ತಿದೆ. ಇದರ ಜೊತೆಗೆ, ಜಾಗ್ರತ ಸಮಿತಿಗಳನ್ನು ನೇಮಿಸಬೇಕೆಂದೂ ಗೈಡ್‌ಲೈನ್ಸ್ ಇದೆ. ನೀವು ಜಾಗ್ರತ ಸಮಿತಿಗಳನ್ನಾದರೂ ನೇಮಿಸಿ, ಕೂಡಲೇ ಅವು ಕಾವಲು ಮಾಡುವಂಥ ಕೆಲಸವನ್ನು ಮಾಡಿದರೆ, ದುಡ್ಡು ಸದುಪಯೋಗವಾಗುತ್ತದೆ. ಯಾರು ಗುತ್ತಿಗೆ ತೆಗೆದುಕೊಳ್ಳುತ್ತಾರೆ ಅವರು ಮತ್ತು ಆಫೀಸರ್ಸ್ ನಮ್ಮಂಥವರು ರಾಜಕಾರಣಿಗಳು ಇವರೆಲ್ಲರೂ ಕೂಡ ಹಂಚಿಕೊಳ್ಳುವುದು ತಮ್ಮ ಅನುಭವಕ್ಕೂ ಬಂದಿರಬಹುದು. ದಯವಿಟ್ಟು ಇದನ್ನು ನಿಲ್ಲಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್:- ಬಹಳ ಯೋಗ್ಯವಾಗಿರತಕ್ಕಂಥ ಸಲಹೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾವು ಪರಿವೀಕ್ಷಣೆ ಮಾಡಿದಂಥ ಸಂದರ್ಭದಲ್ಲಿ ಈ ತರಹದ ಇನ್‌ಸ್ಪೆಕ್ಟರೇಟನ್ನು ಮಾಡಿ ವರದಿಯನ್ನು ಕಳುಹಿಸಿಕೊಡುವುದನ್ನು ಮಾಡಿದ್ದೇವೆ. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಆಗಿರತಕ್ಕಂಥ ಅವ್ಯವಹಾರದ ಬಗ್ಗೆ ಹಿರಿಯ ಅಧಿಕಾರಿಗಳನ್ನು ಕಳುಹಿಸಿದ್ದೇವೆ. ಈಗ ತಾವು ಹೇಳಿದಂತೆ, ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಸಹಿತ ಒಂದು ಜಾಗ್ರತ ಸಮಿತಿಯನ್ನು ಮಾಡಿದರೆ, ಅದರಲ್ಲಿ ಅಧಿಕಾರೇತರರು ಸದಸ್ಯರನ್ನು ಸೇರಿಸಿಕೊಂಡರೆ, ಆಗಲೂ ಕೂಡ ಇಂತಹ ಅಪಾದನೆಗಳು ಬರುವುದಕ್ಕೆ ಸಾಧ್ಯತೆ ಇದೆ. ಅಧಿಕಾರೇತರ ಸದಸ್ಯರಲ್ಲದೇ ಇದ್ದರೆ, ಬರೇ ಇದೆ ಒಂದು ಕೆಲಸ ಕೂಡ ಆಗತಕ್ಕಂಥಾದ್ದು ಇದೆ. ಅದರ ಬಗ್ಗೆ ತಾವು ಸಲಹೆ ಸೂಚನೆಗಳನ್ನು ಒಂದು ವ್ಯವಹಾರಿಕವಾದಂಥ ರೀತಿಯ ಚೌಕಟ್ಟಿನಲ್ಲಿ, ಕಳುಹಿಸಿಕೊಡತಕ್ಕಂತಾದ್ದಾದರೆ ಅದರಿಂದ ಉಪಯೋಗವಾಗುತ್ತದೆ. ಏಕೆಂದರೆ ಅನೇಕ ಸಂದರ್ಭದಲ್ಲಿ ವಿಜಿಲೆನ್ಸ್ ಸ್ಕ್ವಾಡ್ ಎಂದು ಮಾಡಿ, ಅದರಲ್ಲಿ ಬೇರೆಯವರನ್ನು ಸೇರಿಸಿದ ತಕ್ಷಣವೇ ಅವರ ಮೇಲೆಯೂ ಅಪಾದನೆಗಳು ಬಂದಿರತಕ್ಕಂಥಾದ್ದು ಇದೆ. ಈಗ ಸುಮಾರು 80 ಪರ್ಸೆಂಟಿಗಿಂತ ಹೆಚ್ಚು ಗ್ರಾಮಗಳಲ್ಲಿ ಈ ತರಹದ ಜಾಗ್ರತ ಸಮಿತಿಗಳ ರಚನೆಯಾಗಿದೆ ಎಂದು ನನಗೆ ಮಾಹಿತಿ ಬಂದಿದೆ. ಇದರ ವಿಚಾರವಾಗಿ ತಮಗೆ ಮತ್ತೆ ತಿಳಿಸುತ್ತೇನೆ. ಎಲ್ಲೆಲ್ಲಿ ಆಗಿದೆ ಎಂಬ ವಿವರಗಳು ಬೇಕಾದರೆ, ಆ ಪಟ್ಟಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಆದರೆ, ಜಾಗ್ರತ ಸಮಿತಿಗಳ ಮೇಲೆಯೂ ಆಪಾದನೆ ಇರುವುದರಿಂದ, ಕೆಲವು ಸಂದರ್ಭದಲ್ಲಿ ಯಾರು ಯಾರನ್ನು ಸೇರಿಸಬೇಕು....

MR. SPEAKER:- The main solution to this would be grama sabha concept, ಗ್ರಾಮಸಭಾ ಕಾನ್ಸೆಪ್ಟ್ ಇದೆಯಲ್ಲಾ, ಎಲ್ಲಾ ಪಂಚಾಯ್ತಿಯವರು ಅಥವಾ ತಾಲ್ಲೂಕಾ ಪಂಚಾಯ್ತಿ ಸಮಿತಿಯವರು ಕನಿಷ್ಟ ಪ್ರತಿ 6 ತಿಂಗಳಿಗೊಮ್ಮೆ ಗ್ರಾಮಸಭೆಯನ್ನು ಮಾಡಿದರೆ ಕೆಲಸ ಆಗಿರುವುದು, ಇಲ್ಲದೇ ಇರುವುದನ್ನು ಅಲ್ಲಿಯ ಜನ ಹೇಳಿಬಿಡುತ್ತಾರೆ. ನಿಮ್ಮ ವಿಜಿಲೆನ್ಸ್ ಕಮಿಟಿಗಳಿಗಿಂತಲೂ ಕೂಡ, ಗ್ರಾಮಸಭೆ ಕಾನ್‌ಸೆಪ್ಟ್‌ನ್ನು ನಾವು ಒಪ್ಪಿಕೊಂಡರೆ, that would be real decentralisation and strengthening of democracy also.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ವಸ್ತು ಸ್ಥಿತಿ ಏನೆಂದರೆ ಕೇಂದ್ರ ಸರ್ಕಾರದ ನಿಯಮಾನುಸಾರ ಯಾವ ಕಾಮಗಾರಿಯೂ ನಡೆಯುತ್ತಾ ಇಲ್ಲ. ಉದಾಹರಣೆಗೆ ಎನ್.ಎಂ.ಆರ್.ನ

ಕೆಲಸ ಆಗಬೇಕಾಗಿದ್ದರೆ ನಿಂತು ಕೆಲಸ ಮಾಡಬೇಕು. ಇದರ ಪ್ರಕಾರ ನಡೆಯುತ್ತಾ ಇಲ್ಲ. I may say it is a total fraud,.... ಒಂದು ಪುನರ್ ವಿಮರ್ಶೆ ಮಾಡತಕ್ಕ ಆತ್ಮಾವಲೋಕನ ಮಾಡತಕ್ಕ ಸಂದರ್ಭ ಮತ್ತು ಸನ್ನಿವೇಶ ಬಂದಿದೆ. ಇದೇ ರೀತಿ ಮುಂದುವರಿಯಬೇಕೆ ಅಥವಾ ಕಾರ್ಯಗತ ಮಾಡತಕ್ಕ ವಿಧಾನದಲ್ಲಿ ಏನಾದರೂ ಬದಲಾವಣೆ ಮಾಡಬೇಕೇ? ಏಕೆಂದರೆ, ಅವರು ನಿಗದಿಪಡಿಸಿರತಕ್ಕಂಥ 27-28 ರೂಪಾಯಿಗಳ ದಿನಗೂಲಿ ಏನಿದೆ, ರಸ್ತೆ ಮಾಡುವ ಕೆಲಸಕ್ಕೆ, ಮಣ್ಣು ಹೊರುವ ಕೆಲಸಕ್ಕೆ ಜನರು ಬರುವುದಿಲ್ಲ. ಆ ಕಾರಣಕ್ಕಾಗಿ ಆಯಾ ವರ್ಷ ಖರ್ಚು ಮಾಡತಕ್ಕ ಹಣವನ್ನು ಅನಿವಾರ್ಯವಾಗಿ ಯಾವುದಾದರೂ ಆ ಊರಿನಲ್ಲೋ ಅಥವಾ ಇನ್ನಾರಿಂದಲೋ ಹಿಡಿದುಮಾಡಿಸಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ಮುಂದುವರಿಸಿಕೊಂಡು ಹೋಗತಕ್ಕಂಥಾದ್ದು ನ್ಯಾಯವೇ ಅಥವಾ ಆ ಕಾರ್ಯಕ್ರಮವನ್ನು ಕಾರ್ಯಗತ ಮಾಡತಕ್ಕ ವಿಧಾನದಲ್ಲಿ ಬದಲಾವಣೆ ಮಾಡತಕ್ಕಂಥಾದ್ದು ಇದೆಯೇ?

MR. SPEAKER:- He has to take it up at all India level as a Policy Matter...

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಅವರು ಒಂದು ಮಗ್ಗಲಿನ ವಿಚಾರವನ್ನು ತಿಳಿಸಿದರು. ಈಗ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಮಲೆನಾಡಿನ ಪ್ರದೇಶಗಳಲ್ಲಿ, ಕೆಲವು ಭಾಗಗಳಲ್ಲಿ 100 ರೂಪಾಯಿ, 70 ರೂಪಾಯಿನಷ್ಟು ಅಡಿಕೆ ತೋಟ ಸಿಗುವಾಗ, 26 ರೂಪಾಯಿಗಳಿಗೆ ಬರುವವರು ಯಾರೂ ಇಲ್ಲ. ಅದಕ್ಕೆ ನಮ್ಮಲ್ಲಿ ಕೆಲವು ಸಲ ತೊಂದರೆಗಳಾಗಿವೆ. ಆದರೆ, ಉದ್ಯೋಗ ದೃಢೀಕರಣ ಯೋಜನೆಯಲ್ಲಿ 100 ದಿವಸಗಳ ಕಾಮಗಾರಿಯನ್ನು ಒದಗಿಸಲೇ ತೀರಬೇಕೆಂಬುದು ಇರುವುದರಿಂದ ನಮ್ಮ ಭಾಗದಲ್ಲಿ ಈಗಲೂ ಕೂಡ 15 ರೂಪಾಯಿಗೆ ಬರುವಂತಹವರು ಇದ್ದಾರೆ. ಅವರಿಗೆ 100 ದಿವಸದ ಅವಧಿಯಲ್ಲಿ ನಾವು ಕೆಲಸವನ್ನು ಕೊಡಬೇಕೆಂಬ ವಿಚಾರದಲ್ಲಿ ನಾವೇನು ನಿರ್ಣಯ ತೆಗೆದುಕೊಳ್ಳಬೇಕೆಂಬ ಸಲಹೆ ತಮ್ಮ ಮೂಲಕವಾಗಿ ಮತ್ತು ಸದಸ್ಯರ ಮೂಲಕ ಬಂದಿದೆ, ಇದು ಬಹಳ ಯೋಗ್ಯವಾಗಿರತಕ್ಕಂತಾದ್ದು. ಮತ್ತು ಕೆಲವೊಂದು ಮಾರ್ಗಸೂಚಿಗಳೇನಿವೆ, ಕೇಂದ್ರ ಸರ್ಕಾರದಲ್ಲಿ, ಅವೂ ಕೂಡ ಮಾರ್ಪಾಡಾಗಬೇಕಾಗುತ್ತದೆ. ವಸ್ತು ಸ್ಥಿತಿಗೆ ಅನುಗುಣವಾಗಿ ಮಾರ್ಪಾಡಾಗತಕ್ಕ ಅನಿವಾರ್ಯತೆ ಇದೆ. ಯಾವುದೋ ಒಂದು ಮಲೆನಾಡಿನ ಭಾಗವೇ ಇಡೀ ಭಾರತ ದೇಶದ ಚಿತ್ರ ಅಲ್ಲ ಅಥವಾ ಈ ಮೂರು ಜಿಲ್ಲೆಗಳೇ ಇಡೀ ಕರ್ನಾಟಕದ 20 ಜಿಲ್ಲೆಗಳ ಚಿತ್ರ ಅಲ್ಲ. ಆದ್ದರಿಂದ, ನಮ್ಮಲ್ಲಿ ಈಗಲೂ 15 ರೂಪಾಯಿಗಳಿಗೆ ಬರತಕ್ಕಂಥವರು ಇರುವುದರಿಂದ, 20 ರೂಪಾಯಿಗಳಿಗೆ ಬರುವವರು ಇರುವುದರಿಂದ, ನಮ್ಮಲ್ಲಿ ನಡೆಯುತ್ತದೆ. ಆದರೆ, ನೀವು ಹೇಳಿದಂತೆ ಗುತ್ತಿಗೆದಾರರಿಗೆ ಕೊಡತಕ್ಕಂತಾದ್ದು ಏನಿದೆ, ಅದು ದುರುಪಯೋಗಕ್ಕೂ ಕಾರಣ ಆಗುತ್ತದೆ. ಇದನ್ನು ಸಮಗ್ರವಾಗಿ ಯೋಚನೆ ಮಾಡಬೇಕೆಂಬುದಕ್ಕೆ ನನ್ನ ಒಪ್ಪಿಗೆ ಇದೆ.

ಶ್ರೀ ಮಂಜುನಾಥ್ ಸಿ. ಕುನ್ನೂರು:- ಮಾನ್ಯ ಅಧ್ಯಕ್ಷರೇ, ನಿರ್ಮಲ ಗ್ರಾಮ ಯೋಜನೆಯೊಳಗೆ ಶೌಚಾಲಯ ಕಟ್ಟತಕ್ಕಂಥ ಪರಿಸ್ಥಿತಿಯಲ್ಲಿ 1995-96ನೇ ಸಾಲಿನಲ್ಲಿ ನಮ್ಮ

ತಾಲ್ಲೂಕಿನಲ್ಲಿ ಎರಡು ಸಾವಿರ ಶೌಚಾಲಯಗಳನ್ನು ಕಟ್ಟಬೇಕಾಗಿತ್ತು ಆದರೆ ಅದರಲ್ಲಿ 985 ಮಾತ್ರ ಕಟ್ಟಿದ್ದಾರೆ. ಅವರಲ್ಲಿ ಹಣ ಪಾವತಿ 454ಕ್ಕೆ ಮಾತ್ರ ಮಾಡಿದ್ದಾರೆ. ಅಷ್ಟೊಂದು ವಿಳಂಬ ಮಾಡಿದ್ದಾರೆ ಮತ್ತು ಶೌಚಾಲಯಗಳನ್ನು ಕಟ್ಟತಕ್ಕಂಥ ಪರಿಸ್ಥಿತಿಯಲ್ಲಿ ಸರಿಯಾಗಿ ಕಟ್ಟದೆ ಬಹಳಷ್ಟು ದುರುಪಯೋಗವಾಗಿದೆ. ಕಾರಣ ಏನು ಎಂದು ತಿಳಿದು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇನೆ. ಮನೆಗಳ ವಿಚಾರದಲ್ಲಿಯೂ ಕೂಡ ಇಂದಿರಾ ಆವಾಸ್ ಯೋಜನೆಯಲ್ಲಿ ಗುತ್ತಿಗೆಯನ್ನು ಸ್ಥಳೀಕವಾಗಿ ಕೊಟ್ಟಿಲ್ಲ. ಉತ್ತರ ಪ್ರದೇಶದಿಂದ ಬಂದಿರತಕ್ಕಂಥ ಈಜಿಪ್ಟ್ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ 2-3 ಗ್ರಾಮಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಅದನ್ನೂ ಕೂಡ ತಾವು ಗಮನದಲ್ಲಿ ಇಟ್ಟುಕೊಂಡು ಆ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ತಾವು ನಿರ್ಮಲ ಕರ್ನಾಟಕ ವಿಚಾರದಲ್ಲಿ ಹೇಳಿದ್ದೀರಿ. ಕಳೆದ 10 ವರ್ಷದಲ್ಲಿ ಒಂದು ಲಕ್ಷದ 7 ಸಾವಿರ ಶೌಚಾಲಯಗಳನ್ನು ಕಟ್ಟಿದಂತೆ ನಮ್ಮ ವರದಿಯಲ್ಲಿದೆ. ಆದರೆ ಒಂದೇ ವರ್ಷದಲ್ಲಿ 1995ರ ಅಕ್ಟೋಬರ್ ಎರಡರಿಂದ 96ರ ಅಕ್ಟೋಬರ್ ಎರಡರವರೆಗೆ 2 ಲಕ್ಷ 50 ಸಾವಿರ ಕೌಟುಂಬಿಕ ಶೌಚಾಲಯಗಳನ್ನು ನಾವು ಕಟ್ಟಿದ್ದೇವೆ. ಒಂದು ದೊಡ್ಡ ತರಹವಾದ ಪ್ರಗತಿ ಆಗಿದೆ. ಆದರೆ ನಾವು ನಿರ್ಧಾರಪಡಿಸಿದಂತಹ 5 ಲಕ್ಷ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗಿಲ್ಲ. ತಾವು ಹೇಳಿದಂತೆ 2 ಸಾವಿರ ಶೌಚಾಲಯಗಳನ್ನು ಕಟ್ಟಬೇಕೆನ್ನುವ ಗುರಿಯಲ್ಲಿ 800 ನಾವು ಕಟ್ಟಿದ್ದೇವೆ. ಅಲ್ಲಿನ ಜನಗಳಲ್ಲಿ ಜಾಗ್ರತೆಯನ್ನು ಮೂಡಿಸಬೇಕಾದಂತಹ ಒಂದು ಅಗತ್ಯತೆ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಮಲೆನಾಡಿನ ಪ್ರದೇಶದಲ್ಲಿ ಚಿಕ್ಕಮಗಳೂರಿನಲ್ಲಿ ಮತ್ತು ಶಿವಮೊಗ್ಗದಲ್ಲಿ ಹೆಚ್ಚು ಹಣವನ್ನು ಅವರು ಕೇಳುತ್ತಿದ್ದಾರೆ. ಅದರ ಅಗತ್ಯಗಳು ಕಡಿಮೆ. ಆದರೆ ಉತ್ತರ ಕರ್ನಾಟಕದ ಭಾಗದಲ್ಲಿ ಶೌಚಾಲಯಗಳ ಅಗತ್ಯ ಇರತಕ್ಕಂಥಾದ್ದರಲ್ಲಿ ಜನರು ಅದರ ಅಗತ್ಯಗಳನ್ನು ಮನಗಂಡಿಲ್ಲ. ಅದಕ್ಕಾಗಿ ನಾವು ಅವರಿಗೆ ಹೆಚ್ಚಿನ ಪ್ರೇರಣೆ ನೀಡಬೇಕಾಗುತ್ತದೆ. ಅವರ ಕ್ಷೇತ್ರದಲ್ಲಿ 800ಕ್ಕೆ ಮಾತ್ರ ಸೀಮಿತವಾಗಿದೆ. ಅದರಲ್ಲಿ ನಾವು 425ಕ್ಕೆ ಮಾತ್ರ ಹಣ ಕೊಟ್ಟಿದ್ದೇವೆ. ಉಳಿದಿರತಕ್ಕಂಥಾದ್ದು ವಿವಿಧ ಹಂತಗಳಲ್ಲಿ ಇದೆ. ತಾವು ಹೇಳಿದ ಹಾಗೆ ಎನಾದರೂ ಕಳಪೆ ಕಾಮಗಾರಿಗಳು ಆಗಿದ್ದರೆ ನಾನು ಕ್ರಮ ಕೈಗೊಳ್ಳುತ್ತೇನೆ. ತಾವು ನಿರ್ದಿಷ್ಟಪಡಿಸಿದರೆ ಇವತ್ತೇ ನಾನು ಸಿ.ಇ.ಒ ಅವರಿಗೆ ತನಿಖೆ ಮಾಡಲು ಆದೇಶ ಕೊಡುತ್ತೇನೆ.

ವಿಷಯ:- ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ನೇತ್ರಾವತಿ ನದಿಯಿಂದ ನೀರನ್ನು ಒದಗಿಸುವ ಯೋಜನೆ.

9(307)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-